



ವ್ಯಕ್ತಿಗಳ ನಡುವಿನ ಸಂಬಂಧದ ಕುರಿತು

**ಭವನಾಥ,** ವಿನಯದಿಂದ: "ಜನರೊಡನೆ ನನಗೆ ವೈಮನಸ್ಯ ವಿದ್ದರೆ ನನ್ನ ಮನಸ್ಸು ಕಿರಿಕಿರಿ ಅನ್ನುತ್ತದೆ. ಹಾಗಾಗುವುದಾದರೆ ಎಲ್ಲರನ್ನೂ ಪ್ರೀತಿಸಲಾಗುವುದಿಲ್ಲ."

**ಶ್ರೀರಾಮಕೃಷ್ಣರು:** "ಮೊದಲು ಒಮ್ಮೆ ಮಾತುಕತೆಯಾಡು, ಅವರೊಡನೆ ಸ್ನೇಹ ಬೆಳೆಸಲು ಪ್ರಯತ್ನಮಾಡು. ಏನೇ ಪ್ರಯತ್ನ ಪಟ್ಟರೂ ಸಾಧ್ಯವಾಗದೇ ಹೋದರೆ ಅನಂತರ ಅದರ ವಿಷಯ ವಾಗಿ ಕಿಂಚಿತ್ತೂ ವ್ಯಥೆಪಡಬೇಡ. ಭಗವಂತನಿಗೆ ಶರಣಾಗತ ನಾಗು, ಆತ್ಮಚಿಂತನೆ ಮಾಡು. ಆತನನ್ನು ಮರೆತು ಬೇರೆಯವರ ಚಿಂತನೆಯಿಂದ ಮನಸ್ಸನ್ನು ಕೆಡಿಸಿಕೊಳ್ಳುವುದು ಬೇಡ."

**ಭವನಾಥ:** "ಎಲ್ಲರನ್ನೂ ಪ್ರೀತಿಸಬೇಕು ಎಂದು ಯೇಸುಕ್ರಿಸ್ತ, ಚೈತನ್ಯ ಇವರೆಲ್ಲ ಹೇಳಿ ಹೋಗಿರುವರಲ್ಲ?"

**ಶ್ರೀರಾಮಕೃಷ್ಣರು:** "ಭಗವಂತ ಸಕಲ ಭೂತಗಳಲ್ಲಿಯೂ ಇರುವುದ ರಿಂದ ಎಲ್ಲರನ್ನೂ ಪ್ರೀತಿಸಲೇಬೇಕು. ಆದರೂ ದುಷ್ಟರಿಗೆ ಸ್ವಲ್ಪ ದೂರದಿಂದಲೇ ನಮಸ್ಕಾರ ಹಾಕಿಬಿಡಬೇಕು. ಏನು! ಚೈತನ್ಯ ದೇವನೇ? ಆತನೂ ಕೂಡ ಅನ್ಯ ಸಂಪ್ರದಾಯದವರೊಡನೆ ವ್ಯವಹರಿಸುವಾಗ ತನ್ನ ಆಂತರಿಕ ಭಾವನೆಗಳನ್ನು ಒಂದು ಹಿಡಿತದಲ್ಲಿ ಇಟ್ಟುಕೊಳ್ಳುತ್ತಿದ್ದ. ಶ್ರೀವಾಸನ ಮನೆಯಲ್ಲಿ ಆತನ ಅತ್ತೆಯ ಜುಟ್ಟನ್ನು ಹಿಡಿದು ಮನೆಯಿಂದ ಹೊರಕ್ಕೆ ದೂಡುವ ಕಾರ್ಯ ಆತನ ಮೂಲಕ ನಡೆಯಿತು."

**ಭವನಾಥ:** "ಆಕೆಯನ್ನು ಹೊರಕ್ಕೆ ದೂಡಿದವ ಬೇರೆ ಯಾರೋ ಒಬ್ಬ, ಅಲ್ಲವೆ?"

**ಶ್ರೀರಾಮಕೃಷ್ಣರು:** "ಆತನ ಅನುಮತಿಯಿಲ್ಲದಿದ್ದರೆ, ಆ ಕಾರ್ಯ ನಡೆಯುತ್ತಿತ್ತೆ? ಏನು ಮಾಡೋದು, ಪರರ ಹೃದಯವನ್ನು ಗೆಲ್ಲಲಾಗದೆ ಹೋದರೆ, ಅದಕ್ಕಾಗಿ ಹಗಲು ಇರುಳು ಪ್ರಾಣ ಬಿಡಬೇಕೆ? ಯಾವ ಮನಸ್ಸನ್ನು ಭಗವಂತನಿಗೆ ಅರ್ಪಿಸಬೇಕೊ, ಅದನ್ನು ತೆಗೆದುಕೊಂಡು ಹೋಗಿ ಅಲ್ಲಿ ಇಲ್ಲಿ ಬರಿದೆ ವ್ಯಯ ಮಾಡುವುದೆ? 'ತಾಯಿ! ನರೇಂದ್ರ, ರಾಖಾಲ, ಭವನಾಥ ನನಗೆ ಯಾರೂ ಬೇಕಾಗಿಲ್ಲ; ಕೇವಲ ನೀನೊಬ್ಬಳೆ ಬೇಕು. ಮಾನವಜೀವಿಯಿಂದ ನನಗೆ ಆಗಬೇಕಾಗಿರುವುದೇನು?' ಎಂದು ನಾನು ಹೇಳುತ್ತೇನೆ."

**ಪರಮಹಂಸರು (ಈಶಾನನಿಗೆ):** "ನೀನು ಮಧ್ಯಸ್ಥಿಕೆ ಕೆಲಸಗಳಲ್ಲಿ ಏಕೆ ವ್ಯರ್ಥವಾಗಿ ಕಾಲಕಳೆಯುತ್ತಿರುವೆ? ನೀನು ಜನರ ಜಗಳ ಮನಸ್ತಾಪ ಇವನ್ನು ಫೈಸಲು ಮಾಡುತ್ತೀಯೆ. ನಿನ್ನನ್ನು ಜನರು ಮಧ್ಯಸ್ಥನನ್ನಾಗಿ ಮಾಡಿಕೊಳ್ಳುತ್ತಾರೆ ಅಂತ ಕೇಳಿದ್ದೇನೆ. ನೀನು ಆ ರೀತಿಯಾಗಿ ಬಹಳ ಕಾಲದಿಂದ ಮಾಡಿಕೊಂಡು ಬಂದಿದ್ದೀಯೆ. ಯಾರಿಗೆ ಇಚ್ಛೆ ಇದೆಯೊ ಅವರು ಅದನ್ನು ಮಾಡಲಿ. ನೀನು ಈಗ ಆಕೆಯ ಪಾದಪದ್ಮಗಳ ಕಡೆ ಹೆಚ್ಚಾಗಿ ಮನಸ್ಸಿಡು. ಜನ ಹೇಳುತ್ತಾರೆ: 'ರಾವಣ ಲಂಕೆಯಲ್ಲಿ ಸತ್ತರೆ, ಇಲ್ಲಿ ಬೇಹುಳ ಅತ್ತು ಅತ್ತು ಅಳಲೇಕಾಯಿಯಾದ!' ಎಂದು.

"ನೀನು ಮಧ್ಯಸ್ಥಿಕೆ ಕೆಲಸ ಮಾಡುತ್ತೀಯೆ. ಭಗವತಿ ಭಾವಿಸು ತ್ತಾಳೆ, 'ನನ್ನ ಮಗು ಮಧ್ಯಸ್ಥಿಕೆ ಕೆಲಸ ಮಾಡಿಕೊಂಡು ಆನಂದ ದಿಂದ ಇದೆ. ಆನಂದದಿಂದ ಇದೆ ತಾನೆ, ಹಾಗೇ ಇರಲಿ' ಎಂದು."

ಪರಮಹಂಸರು ಮಾತು ಮುಂದುವರಿಸಿದರು: "ಹೊರಗಿನವರೊಡನೆ ಬೆರೆಯುವಾಗ ಎಲ್ಲರನ್ನೂ ಪ್ರೀತಿಸು, ಬೆರೆತು ಒಂದಾಗು. ತಿರಸ್ಕಾರ ದೃಷ್ಟಿಗೆ ಎಡೆಗೊಡಬೇಡ. 'ಆ ವ್ಯಕ್ತಿ ಸಾಕಾರ ಒಪ್ಪುತ್ತಾನೆ, ನಿರಾಕಾರ ಒಪ್ಪುತ್ತಿಲ್ಲ; ಈತ ನಿರಾಕಾರ ಒಪ್ಪುತ್ತಾನೆ, ಸಾಕಾರ ಒಪ್ಪುತ್ತಿಲ್ಲ; ಆತ ಹಿಂದು, ಈತ ಮುಸಲ್ಮಾನ; ಆತ ಕ್ರಿಶ್ಚಿಯನ್' ಎಂಬುದಾಗಿ ತಿರಸ್ಕಾರ ದೃಷ್ಟಿಯಿಂದ ಮೂಗು ಮುರಿಯಬೇಡ. ಭಗವಂತನೇ ಜನರಿಗೆ ವಿವಿಧ ದೃಷ್ಟಿಯನ್ನು ಕೊಟ್ಟಿದ್ದಾನೆ. ಪ್ರತಿಯೊಬ್ಬರದೂ ಬೇರೆ ಬೇರೆ ಪ್ರಕೃತಿ ಎಂಬುವನ್ನು ಮೊದಲು ಅರಿತುಕೊ. ಅರಿತುಕೊಂಡು ಅವರೊಡನೆ ಬೆರೆ. ಸಾಧ್ಯವಾದಷ್ಟು ಮಟ್ಟಿಗೆ, ಎಲ್ಲರನ್ನೂ ಪ್ರೀತಿಸು. ಬಳಿಕ ನಿನ್ನ ಅಂತರಂಗದೊಳಗೆ ಹಿಂದಿರುಗಿ ಹೋಗಿ ಶಾಂತಿ ಮತ್ತು ಆನಂದ ವನ್ನು ಅನುಭವಿಸು.

**ಹೃದಯಮಂದಿರದಲ್ಲಿ ಜ್ಞಾನದೀಪಿಗೆ ಹಚ್ಚಿ**
**ಬ್ರಹ್ಮಮಯಿ ಮಾತೆಯ ಮುಖವ ನೋಡು.**

ನಿನ್ನ ಸ್ವಂತ ಅಂತರ್ಯದಲ್ಲಿ ಮಾತ್ರವೆ ಸ್ವಸ್ವರೂಪದ ದರ್ಶನ ಪಡೆಯಬಲ್ಲೆ. ಗೋಪಾಲಕರು ದನ ಮೇಯಿಸಲು ಹೋದಾಗ, ಎಲ್ಲ ದನಗಳು ಹುಲ್ಲುಗಾವಲಿಗೆ ಹೋಗಿ ಒಂದಾಗಿ ಕಲೆತುಹೋಗುತ್ತವೆ; ಒಂದು ಹಿಂಡಾಗಿಬಿಡುತ್ತವೆ. ಆದರೆ ಸಾಯಂಕಾಲ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗುವಾಗ ಮತ್ತೆ ಮತ್ತೆ ಬೇರೆಯಾಗಿಬಿಡುತ್ತವೆ. ಅದಕ್ಕಾಗಿಯೇ ನಾನು ಹೇಳೋದು, ನಿನ್ನೊಳಗೆ ನೀನೇ ನೀನಾಗಿರು ಎಂದು.

**ಶ್ರೀರಾಮಕೃಷ್ಣರು (ಮನಮೋಹನನಿಗೆ)** : "ಎಲ್ಲಾ ರಾಮನೇ ಆಗಿ ಕಾಣುತ್ತಿದ್ದಾನೆ. ನೀವೆಲ್ಲಾ ಕುಳಿತುಕೊಂಡಿದ್ದೀರಿ; ರಾಮನೇ ನಿಮ್ಮ ಪ್ರತಿಯೊಬ್ಬರ ರೂಪವನ್ನು ಧರಿಸಿ ಕುಳಿತಿರುವಂತೆ **ಕಾಣುತ್ತಿದೆ"** ಆತನೇ ಎಲ್ಲಾ ಆಗಿರುವುದು ನನಗೆ ಕಾಣುತ್ತಿದೆ. ಆತನೇ ಜೀವ, ಜಗತ್ತು ಆಗಿದ್ದಾನೆ."